2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಚಿಕ್ಕಮಗಳೂರು.

**ಎಸ್.ಸಿ.ನಂ. *63/2016***

ಆರೋಪಿಯ ಹೆಸರು ಃ ಟಿಪ್ಪು ಯಾನೆ ಮೊಹಮ್ಮದ್ ಟಿಪ್ಪು **A-7**

ತಂದೆಯ ಹೆಸರು ಃ ಕೆ ಚಾಯಬ್ಬ

ವಯಸ್ಸು ಃ 32 ವರ್ಷ

ಉದ್ಯೋಗ ಃ ವ್ಯಾಪಾರ

ವಾಸಸ್ಥಳ ಃ ಕಡ್ಲೆಮಕ್ಕಿ , ಬಾಳೆಹೊನ್ನೂರು,
ಎನ್. ಆರ್. ಪುರ ತಾಲ್ಲೂಕು.

ಕಲಂ 313 ಸಿ.ಆರ್ ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ.

ಪ್ರಶ್ನೆ 1ಃ ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?

ಉತ್ತರಃ ಕೆಳಿದ್ದೇನೆ

ಪ್ರಶ್ನೆ 2 ಪ್ರಾಸಾ.1 ಶ್ರೀ ಅನಿಲ್ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಆಸ್ಪತ್ರೆಯಿಂದ ಬಿಡುಗಡೆಯಾದ ಮೇಲೆ ಪೋಲಿಸ್ ಠಾಣೆಗೆ ಹೋಗಿ, ತನ್ನ ರಕ್ತ ಹತ್ತಿದ ಪ್ಯಾಂಟ್ ಮತ್ತು ಶರ್ಟನ್ನು ಹಾಜರುಪಡಿಸಿರುತ್ತೇನೆ, ಪಂಚರ ಸಮಕ್ಷಮ ಸದರಿ ಬಟ್ಟೆಗಳನ್ನು ನಿಪಿ.2 ಪಂಚನಾಮೆ ಮೂಲಕ ಜಪ್ತಿಪಡಿಸಿಕೊಂಡಿರುತ್ತಾರೆ, ಅವುಗಳನ್ನು ಒಂದು ಬ್ಯಾಗಿನಲ್ಲಿ(mo.1) ಹಾಕಿ ತನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ, 1 ರಿಂದ 6 ನೇ ಆರೋಪಿತರು ಹೊಡೆದ ನಂತರ 7 ನೇ ಆರೋಪಿಯಾದ ನಿನ್ನ ಹತ್ತಿರ ಬಂದು ನೀನು ಹೇಳಿದಂತೆ ಉಳಿದ ಆರೋಪಿಗಳು ತನಗೆ ಹೊಡೆದರು, ತದನಂತರ ನಿನ್ನ ಕಾರಿನಲ್ಲಿ ಉಳಿದ ಆರೋಪಿಗಳು ಶಿವಮೊಗ್ಗಕ್ಕೆ ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 3 ಪ್ರಾಸಾ.3 ಶ್ರೀ ಕೆ ಮಂಜುನಾಥ, ಗಾರೆ ಕೆಲಸ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 15.06.2015 ರಂದು ಸಂಜೆ 6 ಗಂಟೆ ಸಮಯದಲ್ಲಿ ಪೋಲಿಸರು

ರೇಣುಕಾನಗರದ ಗಣಪತಿ ದೇವಸ್ಥಾನದ ರಸ್ತೆಯಲ್ಲಿ ಪೋಲಿಸರ ಜೊತೆ ಸಂದೀಪ್ ಇದ್ದಾಗ, ಸಂದೀಪ್ ಸ್ಥಳವನ್ನು ತೋರಿಸಿದರು, ಆ ಸ್ಥಳದಲ್ಲಿ 3 ದೊಣ್ಣೆ 2 ರಾಡ್ ಗಳನ್ನು ನಿಪಿ.3 ಮಹಜರ್ ಮೂಲಕ ಜಪ್ತು ಮಾಡಿಕೊಂಡರು ಹಾಗೂ ಆ ಸಮಯದಲ್ಲಿ ನಿಪಿ.4 ರಂತೆ ತನ್ನ ಪೋಟೋವನ್ನು ತೆಗೆದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 4 ಪ್ರಾಸಾ.4 ಶ್ರೀ ಪುಟ್ಟನಂಜ ಎಲಿಗಾರ್ ಇವರು ತಮ್ಮ ಸಾಕ್ಷ್ಯದಲ್ಲಿ ಒಂದುವರೆ ವರ್ಷದ ಹಿಂದೆ 4 ಗಂಟೆ ಸಮಯದಲ್ಲಿ ಗಲಾಟೆಯಾದ ಒಂದು ವಾರಕ್ಕೆ ಪೋಲಿಸ್ ಠಾಣೆಯ ಮುಂದೆ ಹೋಗುತ್ತಿರಬೇಕಾದರೆ ಪೋಲಿಸರು ತನ್ನನ್ನು ಕರೆದರು, ಆ ಸಮಯದಲ್ಲಿ ಅನಿಲ್ ರವರು ರಕ್ತ ಹತ್ತಿದ ಶರ್ಟ್ ಮತ್ತು ಪ್ಯಾಂಟನ್ನು ಹಾಜರುಪಡಿಸಿದರು, ಆಗ ಅವುಗಳನ್ನು ಜಪ್ತುಪಡಿಸಿಕೊಂಡು ನಿಪಿ.2 ರಂತೆ ಮಹಜರ್ ಮಾಡಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 5 ಪ್ರಾಸಾ.5 ಶಶಾಂಕ್ ಇವರು ತಮ್ಮ ಸಾಕ್ಷ್ಯದಲ್ಲಿ ಒಂದುವರೆ ವರ್ಷದ ಹಿಂದೆ 4 ಗಂಟೆ ಸಮಯದಲ್ಲಿ ಗಲಾಟೆಯಾದ ಒಂದು ವಾರಕ್ಕೆ ಪೋಲಿಸ್ ಠಾಣೆಯ ಮುಂದೆ ಹೋಗುತ್ತಿರಬೇಕಾದರೆ, ಪೋಲಿಸರು ತನ್ನನ್ನು ಕರೆದರು, ಆ ಸಮಯದಲ್ಲಿ ಅನಿಲ್ ರವರು ರಕ್ತ ಹತ್ತಿದ ಶರ್ಟ್ ಮತ್ತು ಪ್ಯಾಂಟನ್ನು ಹಾಜರುಪಡಿಸಿದರು, ಆಗ ಅವುಗಳನ್ನು ಜಪ್ತುಪಡಿಸಿಕೊಂಡು, ನಿಪಿ.2 ರಂತೆ ಮಹಜರ್ ಮಾಡಿದರು ಮತ್ತು ಅವುಗಳನ್ನು ಪ್ರತ್ಯೇಕವಾಗಿ ಒಂದು ಬ್ಯಾಗಿನಲ್ಲಿ ಹಾಕಿ, ತಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ6 ಪ್ರಾಸಾ.14 ಡಾಃ ಶ್ರೀನಾಥ ವೈದ್ಯಾಧಿಕಾರಿಗಳು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ **13.06.2015** ರಂದು ರಾತ್ರಿ **8.25** ಗಂಟೆ ಸಮಯದಲ್ಲಿ ಅನಿಲ್ ಎನ್ನುವವರು ಜುಬೇರ್, ಶರೀಫ್, ತೌಸಿಫ್, ಆಸಿಫ್ ಇತರರು ಚಾಕು ರಾಡುಗಳಿಂದ ಹಲ್ಲೆ ಮಾಡಿದ್ದಾರೆಂದು ಚಿಕಿತ್ಸೆಗೆ ಬಂದಿದ್ದರು, ಅವರನ್ನು ಪರೀಕ್ಷೆ ಮಾಡಿದಾಗ ತಲೆಯ ಮದ್ಯ ಭಾಗದಲ್ಲಿ ಆರಿದ ಗಾಯ ಇದ್ದು, ತಲೆಯ ಬಲಭಾಗದಲ್ಲಿ ಮೂಗಿನ ಎರಡು ಹೊಳ್ಳೆಗಳಲ್ಲಿ ರಕ್ತ ಸ್ರಾವವಾಗುತ್ತಿತ್ತು, ಎಡ ತೋರು ಬೆರಳು ಮತ್ತು ಹೆಬ್ಬೆರಳಿನ ಮದ್ಯದಲ್ಲಿ ಆಳವಾದ ಗಾಯ ಇತ್ತು, ಬೆನ್ನಿನ ಬಲಭಾಗದಲ್ಲಿ ರಕ್ತ ಹೆಪ್ಪುಗಟ್ಟಿದ ಊತದ ಗಾಯ ಮತ್ತು ಬೆನ್ನಿನ

ಕೆಳಭಾಗದಲ್ಲಿ ತರಚಿದ ಗಾಯ ಇತ್ತು, ಈ ಗಾಯಗಳೆಲ್ಲ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಈ ಬಗ್ಗೆ ನಿಪಿ.8 ರಂತೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಹಾಗೂ 1 ನೇ ಗಾಯ ರಾಡಿನಿಂದ 2 ಮತ್ತು 3 ಗಾಯ ಕತ್ತಿಯಿಂದ ಉಳಿದ ಗಾಯಗಳು ದೊಣ್ಣೆಯಿಂದ ಹೊಡೆದರೆ ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ7 ಪ್ರಾಸಾ.16 ಶ್ರೀ ಯು.ಬಿ. ನಂದಕುಮಾರ್ ಅರಕ್ಷಕ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.06.2015 ರಂದು ಎ.ಎಸ್.ಐ ಕಳಸಪ್ಪರವರಿಂದ ಕಡತವನ್ನು ಪಡೆದುಕೊಂಡು, ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ಕೊಟ್ಟು, ದಾಖಲಾಗಿದ್ದ ಅನಿಲ್ ನನ್ನು ಭೇಟಿಯಾಗಿ ಮುಂದುವರೆದ ಹೇಳಿಕೆಯನ್ನು ಮಾಡಿಕೊಂಡು, ದಿನಾಂಕ 14.06.2015 ರಂದು ಸಂಜೆ 5 ಗಂಟೆ ಸಮಯದಲ್ಲಿ ಬಾಳೆಹೊನ್ನೂರು ಪಿ.ಎಸ್.ಐ ಲೋಹರ್ ಮತ್ತು ಸಿಬ್ಬಂದಿಯವರು ತನ್ನ ಮುಂದೆ ಲತೀಫ್ ತೌಸಿಫ್ ಮತ್ತು ಶರೀಫ್ ರವರನ್ನು ಹಾಜರುಪಡಿಸಿದರು, ಅವರನ್ನು ವಿಚಾರಣೆಗೆ ಒಳಪಡಿಸಿ, ದಸ್ತಗಿರಿ ಕ್ರಮವನ್ನು ಅನುಸರಿಸಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಬಂಧನ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ8 ಪ್ರಾಸಾ.16 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕ 15.06.2015 ರಂದು ಗುನ್ನ ಸ್ಥಳಕ್ಕೆ ಭೇಟಿ ಕೊಟ್ಟು, ಸಂದೀಪ್ ರವರು ತೋರಿಸಿದ ಸ್ಥಳದಲ್ಲಿ ಮಂಜುನಾಥ ಬಿನ್ ಶಶಿಕುಮಾರ್, ಮಂಜುನಾಥ ಬಿನ್ ಕೃಷ್ಣಪ್ಪ ರವರ ಸಮಕ್ಷಮ ವಹಜರನ್ನು ಮಾಡಿ, ಮಹಜರ್ ಸಮಯದಲ್ಲಿ 2 ಕಬ್ಬಿಣದ ರಾಡುಗಳನ್ನು ಮತ್ತು 3 ದೊಣ್ಣೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ, ಸಂದಿಪ್ ಮತ್ತು ಪ್ರಮೋದರವರ ಹೇಳಿಕೆಯನ್ನು ಪಡೆದುಕೊಂಡು, ಅಮಾನತುಪಡಿಸಿಕೊಂಡು ವಸ್ತುಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ, ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡು, ಮುಂದಿನ ತನಿಖೆಯನ್ನು ಕೃಷ್ಣಮೂರ್ತಿಯವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ9 ಪ್ರಾಸಾ.17 ಶ್ರೀ ಕೃಷ್ಣಮೂರ್ತಿ ಅರಕ್ಷಕ ವೃತ್ತ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ- ದಿನಾಂಕ 22.06.2015 ರಂದು ಬಾಳೆಹೊನ್ನೂರು ಠಾಣೆಗೆ

ಭೇಟಿ ಕೊಟ್ಟಾಗ ಈ ಕೇಸಿನ ಪಿರ್ಯಾದಿ ಅನಿಲ್ ಹಾಜರಾಗಿ ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಜರುಪಡಿಸಿದರು ಅವುಗಳನ್ನು ನಿಪಿ.2 ರಡಿಯಲ್ಲಿ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ10 ಪ್ರಾಸಾ.19 ಶ್ರೀ ಕಳಸಪ್ಪ ಎ.ಎಸ್.ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.06.2015 ರಂದು ರಾತ್ರಿ 9 ಗಂಟೆಗೆ ಹೆಚ್ ಸಿ ನಂ.54 ರವರು ಗಾಯಾಳುವಿನ ಹೇಳಿಕೆಯನ್ನು ನಿಪಿ.1 ರಂತೆ ಮಾಡಿಕೊಂಡು ಬಂದು ಹಾಜರುಪಡಿಸಿದ ಮೇರೆಗೆ ಅದನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನಿಪಿ.14 ರಂತೆ ನ್ಯಾಯಾಲಯಕ್ಕೆ ಕಳುಹಿಸಿ ಮುಂದಿನ ತನಿಖೆಯನ್ನು ವೃತ್ತ ನಿರೀಕ್ಷಕರಿಗೆ ವರ್ಗಾಯಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆಃ 11 ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಇರುವುದಿಲ್ಲ

ಪ್ರಶ್ನೆಃ 12 ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಃ

ಉತ್ತರಃ ಸಾಕ್ಷಿ ವಿಚಾರಣೆ ಇರುತ್ತದೆ

ಆರೋಪಿತರಿಗೆ ಅವರು ತಿಳಿದ ಭಾಷೆಯಲ್ಲಿ ಹೇಳಿಕೆಯನ್ನು ಓದಿ ಹೇಳಲಾಗಿ ಅದರಂತೆ ಆರೋಪಿತರ ಹೇಳಿಕೆಯನ್ನು ದಾಖಲು ಮಾಡಲಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 17 ನೇ ಜುಲೈ ಮಾಹೆ 2019.

ಸಹಿ/-
2 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಆರೋಪಿತನ ಸಹಿ.